# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




**ನವದೆಹಲಿ:** ಬಿರ್ಸಾ ಮುಂಡಾ ಅವರ 150ನೇ ವರ್ಷದ ಜಯಂತಿಯ ಪ್ರಯುಕ್ತ ಬಾನ್ಸೇರಾ ಉದ್ಯಾನವನದಲ್ಲಿ 3000ಕೆಜಿ ತೂಕದ ಬಿರ್ಸಾ ಮುಂಡಾ ಅವರ ಪ್ರತಿಮೆಯನ್ನು ಕೇಂದ್ರ ಗೃಹಮಂತ್ರಿ ಅಮಿತ್ ಶಾ ಉದ್ಘಾಟಿಸಿದರು.


ಸಂಪುಟ : 46 | ಸಂಚಿಕೆ : 15 | ಕಾರ್ತಿಕ–ಮಾರ್ಗಶಿರ | ಕಲಿಯುಗಾಬ್ದ 5126 | 01–12–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಸಂವಿಧಾನಕ್ಕೆ 75 ವರ್ಷ : ರಾಷ್ಟ್ರಕಟ್ಟುವ ಸಾರ್ಥಕ ಹಾದಿ

■ **ಪೃಥ್ವೀಶ್ ಧರ್ಮಸ್ಥಳ**

ಭಾರತ ಜಗತ್ತಿನ ಅತ್ಯಂತ ಬೃಹತ್ ಪ್ರಜಾಪ್ರಭುತ್ವದ ರಾಷ್ಟ್ರ. ಹಲವು ಭಾಷೆ, ಜಾತಿ, ಮತ, ಪಂಗಡಗಳಿದ್ದರೂ ಅವರೆಲ್ಲರ ಯೋಗಕ್ಷೇಮವನ್ನು, ಹಕ್ಕುಗಳನ್ನು ನೀಡಿರುವ ವಿಶಿಷ್ಟವಾದ ಸಂವಿಧಾನ ನಮ್ಮದು. ಅಂತಹ ಸಂವಿಧಾನಕ್ಕೆ ಈಗ 75 ವರ್ಷಗಳು ತುಂಬಿವೆ. ಈ ಸಂದರ್ಭದಲ್ಲಿ ನಾಡಿನ ಭವಿಷ್ಯವನ್ನು ನಿರ್ಮಿಸುವ ಯುವಕರು ಸಂವಿಧಾನವನ್ನು ಅರ್ಥೈಸಿಕೊಳ್ಳಬೇಕಾದ ಅಗತ್ಯತೆಯನ್ನು ಅರಿಯಬೇಕಿದೆ.


ಈ ದೇಶದ ವಿಶೇಷತೆ ಏನೆಂದರೆ ಜನರು ರಾಮಾಯಣ ಓದದೆಯೇ ಅದರ ಕಥೆ ತಿಳಿದುಕೊಂಡಿರುತ್ತಾರೆ. ಮಹಾಭಾರತ – ಭಗವದ್ಗೀತೆ ಓದಿ ತಿಳಿಯದೆಯೇ ಅದರಲ್ಲಿನ ಪಾತ್ರಗಳು, ಸನ್ನಿವೇಶಗಳು, ಉಪಕಥೆಗಳು, ಕೃಷ್ಣನ ಉಪದೇಶಗಳನ್ನು ಅರಿತುಕೊಂಡಿರುತ್ತಾರೆ. ಪುರಾಣ – ಇತಿಹಾಸದ ಉದಾಹರಣೆಗಳನ್ನೂ ಬಲ್ಲವರಿದ್ದಾರೆ. ಅದೇ ರೀತಿ ಭಾರತದ ಸಂವಿಧಾನವನ್ನೂ, ಅದರಲ್ಲಿನ ಹಕ್ಕುಗಳ ಕುರಿತು ಪ್ರತಿಪಾದಿಸುತ್ತಾರೆ, ಕರ್ತವ್ಯಗಳೊಂದಿಗೆ ವ್ಯವಹರಿಸುತ್ತಾರೆ. ಏಕೆಂದರೆ ರಾಮಾಯಣ – ಮಹಾಭಾರತದಂತೆ ಸಂವಿಧಾನವು ವ್ಯಕ್ತಿ ಮತ್ತು ರಾಷ್ಟ್ರದ ಜೀವನ ಮೌಲ್ಯವಾಗಿದೆ. ಅನೇಕ ವರ್ಷಗಳ ದಾಸ್ಯದ ಸಂಕೋಲೆ ಕಳಚಿ ಬಿದ್ದಾಗ ರಾಷ್ಟ್ರೀಯ ಹೃದಯಗಳಲ್ಲಿ ಚಿಮ್ಮಿದ ಸ್ವಾಭಿಮಾನ, ಸ್ವಾಯತ್ತತೆ, ಆತ್ಮಗೌರವ, ಜ್ಞಾನ ಮತ್ತು ನಾಡಿನ ಅಸ್ಮಿತೆಯ ದರ್ಶನವಾಗಿ ಈ ದೇಶದ ಸಂವಿಧಾನ ನಿಂತಿದೆ.

ಭಾರತದ ಸಂವಿಧಾನವು ವಿಶ್ವದ ಅತೀದೊಡ್ಡ ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ಪ್ರತಿಯೊಬ್ಬ ಪ್ರಜೆಗೂ ತನ್ನ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೆನಪಿಸುವುದರ ಜೊತೆಗೆ ಗಣತಂತ್ರ ವ್ಯವಸ್ಥೆಯನ್ನು ಮುನ್ನಡೆಸಲು ದಾರಿದೀಪದಂತೆ ಕಾರ್ಯನಿರ್ವಹಿಸುತ್ತದೆ. ಅದರ ಮೂಲಕ ಈ ನಾಡಿನ ಅಂತಿಮ ವ್ಯಕ್ತಿಯೂ ಧೈರ್ಯವಾಗಿ ತಮ್ಮ ಹಕ್ಕನ್ನು ಪಾಲಿಸುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ರಾಷ್ಟ್ರನಿರ್ಮಾಣಕ್ಕೆ ಮುಖ್ಯವಾಗಿ ಯುವಜನತೆಯು ಸಂವಿಧಾನ ನೀಡುವ ಸಾಮಾಜಿಕ ಜವಾಬ್ದಾರಿಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಭಾರತೀಯ ಸನಾತನ ಸಂಸ್ಕೃತಿಯ ಪ್ರತಿರೂಪದಂತೆ ಸಂವಿಧಾನವನ್ನು ರಚಿಸಲಾಗಿದ್ದು, ಈ ನೆಲದ ಆದರ್ಶ ಪುರುಷರಾದ ರಾಮ–ಕೃಷ್ಣ–ಬುದ್ಧರು ಮತ್ತು ಋಷಿ–ಮುನಿಗಳು ನೀಡಿದ ಸಂದೇಶಗಳೇ ಸಾಮಾಜಿಕ ಜವಾಬ್ದಾರಿಯಾಗಿ ಸಂವಿಧಾನದಲ್ಲಿ ಕಾಣಬಹುದು. ಸಂವಿಧಾನ ನೀಡಿರುವ ಹಕ್ಕುಗಳಲ್ಲಿ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಕಡ್ಡಾಯ ಶಿಕ್ಷಣದ ಹಕ್ಕು, ಸಾಂಸ್ಕೃತಿಕ ಹಕ್ಕು, ಧಾರ್ಮಿಕ ಹಕ್ಕುಗಳು ಪ್ರಮುಖವಾಗಿದ್ದು, ಇವೆಲ್ಲವೂ ಈ ರಾಷ್ಟ್ರದ ಜನ ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದೇ ಆಗಿದೆ.

ಒಬ್ಬ ವ್ಯಕ್ತಿಯ ಹುಟ್ಟು, ಆತನ ಬಣ್ಣ, ಹುಟ್ಟಿದ ಜಾಗ, ಹುಟ್ಟಿದ ಜಾತಿ, ಲಿಂಗ, ಆಡುವ ಭಾಷೆ, ಉಡುಗೆ–ತೊಡುಗೆಯಿಂದ ಆತನನ್ನು ಅವಮಾನಿಸುವುದು ಅಸಮಾನತೆ ಮತ್ತು ಸಾಮಾಜಿಕ ಅನ್ಯಾಯವಾಗಿ ಬಿಡುತ್ತದೆ. ಇತ್ತೀಚಿಗೆ ಕೊಪ್ಪಳದ ಮರಕುಂಬಿ ಪ್ರಕರಣದ ಕುರಿತಾಗಿ ಕೋರ್ಟ್ ನೀಡಿದ ತೀರ್ಪು ನಮಗೆ ತಿಳಿದಿರಬಹುದು. ಆದ್ದರಿಂದ ಯುವಜನತೆಯು ಸಾಮಾಜಿಕ ಪಿಡುಗುಗಳಿಂದ ಮೇಲೆದ್ದು ಸಮಾಜ ಮತ್ತು ವ್ಯಕ್ತಿಗಳ ಮಧ್ಯೆ ಸೇತುವೆಯಂತೆ ಕೆಲಸಮಾಡಬೇಕಿದೆ. ಸಮಾಜದಲ್ಲಿ ನಡೆಯುವ ಅಸಮಾನತೆ ಮತ್ತು ಶೋಷಣೆಯ ವಿರುದ್ಧವಾಗಿ ಹೋರಾಡಲು ಸಂವಿಧಾನವನ್ನು ಧ್ವನಿಯಾಗಿಸಿಕೊಳ್ಳಬೇಕು.

ಸಂವಿಧಾನ ತನಗೆ ನೀಡಿರುವ ಜವಾಬ್ದಾರಿ ಕೇವಲ ಹಕ್ಕು–ಕರ್ತವ್ಯಗಳ ನಿರ್ವಹಣೆ ಮಾತ್ರವಲ್ಲದೆ, ಸಮಾಜ ನಿರ್ಮಾಣದ ಕಾರ್ಯವನ್ನು ಉಲ್ಲೇಖಿಸಲಾಗಿದೆ. ರಾಷ್ಟ್ರದ ಏಳಿಗೆ, ಅಭಿವೃದ್ಧಿ, ಸಾರ್ವಭೌಮತ್ವ, ಗೌರವ, ಸ್ವಾಭಿಮಾನದ ರಕ್ಷಣೆ ಮತ್ತು ಅದನ್ನು ಕಾಪಾಡಿಕೊಳ್ಳುವುದು ಹಾಗೂ ಈ ಮೂಲಕ ಇತರರಲ್ಲಿ ಜಾಗೃತಿಗೊಳಿಸಬಹುದು. ನಮ್ಮ ವೇದ – ಪುರಾಣಗಳಲ್ಲಿ ಹೇಳಿರುವಂತೆಯೇ ನಮ್ಮ ಪರಿಸರ, ಸುತ್ತಲಿನ ವಾತಾವರಣ, ಅರಣ್ಯ, ನದಿ, ಪ್ರಾಣಿ – ಸಂಕುಲಗಳನ್ನು ಪ್ರೀತಿಸಿ ಪೋಷಿಸುವುದು ಸಂವಿಧಾನದ ಜವಾಬ್ದಾರಿಯಾಗಿರುತ್ತದೆ.

ಭಾರತದ ಸಂವಿಧಾನ ನಮಗೆ ನೀಡಿರುವ ಅತೀ ದೊಡ್ಡ ಶಕ್ತಿ ಎಂದರೆ ಮತದಾನದ ಹಕ್ಕು. ಯಾವುದೇ ಲಿಂಗ ತಾರತಮ್ಯವಿಲ್ಲದೇ ಈ ನಾಡಿನ ಭವಿತವ್ಯಕ್ಕೆ ತಮ್ಮ ಮತಗಳ ಮೂಲಕ ಎಲ್ಲಾ ನಾಗರಿಕರೂ ಶ್ರಮಿಸಬಹುದು ಎನ್ನುವುದನ್ನು ಎಲ್ಲರಿಗೂ ನೀಡಿದ ಮತದಾನದ ಹಕ್ಕು ತಿಳಿಸಿಕೊಡುತ್ತದೆ. ಸಕ್ರಿಯ ಪೌರತ್ವದ ಕಾರಣದಿಂದ ಯಶಸ್ವಿ ಪ್ರಜಾಪ್ರಭುತ್ವದ ಆಚರಣೆ ಸಾಧ್ಯ ಎಂಬ ಪ್ರಾಜ್ಞರ ನುಡಿಯಂತೆ ಮತದಾನದಲ್ಲಿ ಭಾಗವಹಿಸುವುದಲ್ಲದೆ, ಆಯಾ ಹಂತದ ಸರ್ಕಾರಗಳ ಅಗತ್ಯ ಚರ್ಚೆಗಳಲ್ಲಿ ಭಾಗವಹಿಸಬಹುದು, ಕಾನೂನು ರಚನೆಗಳಲ್ಲಿ ಪಾಲು ಪಡೆಯಬಹುದು, ನಾವು ಮತದಾನ ಮಾಡುವುದು ನಮ್ಮ ಹಕ್ಕು ಎಂದಾದರೆ ಇತರರನ್ನು ಮತದಾನಕ್ಕೆ ಪ್ರೇರೇಪಿಸುವುದು ಖಂಡಿತವಾಗಿಯೂ ನಮ್ಮ ಜವಾಬ್ದಾರಿಯೇ ಆಗಿರುತ್ತದೆ.




### ಯುವನಾಯಕತ್ವಕ್ಕಾಗಿ ಸಂವಿಧಾನ:

ಸಂವಿಧಾನದ ಜ್ಞಾನವು ಯುವನಾಯಕತ್ವವನ್ನು ಸೃಷ್ಟಿಸುತ್ತದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜಸೇವೆಯ ಮೂಲಕ ಪಾರದರ್ಶಕ ನಾಯಕತ್ವ ಸಂವಿಧಾನದಲ್ಲಿದೆ. ಸಂವಿಧಾನದ 13ನೇ ವಿಧಿಯು ಹೇಳುವಂತೆ ಯಾವೊಬ್ಬ ವ್ಯಕ್ತಿಯು ಕಾನೂನುಗಿಂತ ಮಿಗಿಲಲ್ಲ. ಏಕೆಂದರೆ ಸಂವಿಧಾನ ಮತ್ತು ಕಾನೂನು ಯಾವುದೇ ವ್ಯಕ್ತಿ ಕೇಂದ್ರಿತವಾಗಿಲ್ಲ ಬದಲಾಗಿ ತತ್ತ್ವ ಕೇಂದ್ರಿತವಾಗಿದೆ. ಹಾಗಾಗಿ ಇದನ್ನ 'ರೂಲ್ ಆಫ್ ಲಾ' ಎಂದು ಗುರುತಿಸುತ್ತಾರೆ. ಕೆಲವೊಂದು ಸಾಮಾಜಿಕ ನ್ಯಾಯಕ್ಕಾಗಿ, ಕೆಲವು ವರ್ಗಗಳನ್ನು ಸಮಾಜದ ಮೇಲಿನ ಹಂತಕ್ಕೆ ಕೊಂಡೊಯ್ಯುವ ದೃಷ್ಟಿಯಿಂದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಏಳಿಗೆಗಾಗಿ 15 ಮತ್ತು 16ನೇ ವಿಧಿಯಲ್ಲಿ ಮೀಸಲಾತಿಯ (Reservation) ಉಲ್ಲೇಖವನ್ನು ಕೂಡ ಕಾಣಬಹುದು. ಯುವ ಸಮುದಾಯ ತಪ್ಪು ಮತ್ತು ಕೆಟ್ಟ ದಾರಿ ಹಿಡಿಯಬಾರದೆನ್ನುವ ಉದ್ದೇಶದಿಂದ ಸತ್ಯ ಮತ್ತು ಪಾರದರ್ಶಕತೆಯ ಅಡಿಪಾಯದಲ್ಲಿ ಸಾಂವಿಧಾನಿಕ ತತ್ತ್ವಗಳನ್ನು ಜೋಡಿಸಲಾಗಿದೆ, ಇತರರನ್ನು ತಪ್ಪು ದಾರಿಗೆ ಎಳೆಯುವುದು, ತಪ್ಪು ಮಾಹಿತಿ ನೀಡುವುದು, ಸಮಾಜ ಹಿತಕ್ಕೆ ಮಾರಕವಾಗುವ ಸಂಗತಿಗಳನ್ನು ಬದಿಗಿಟ್ಟು ಸಂಪೂರ್ಣ ಜ್ಞಾನಕ್ಕಾಗಿ ಯುವಜನತೆ ಸಂವಿಧಾನದ ಕಡೆಗೆ ಮುಖಮಾಡಬೇಕಿದೆ. ಈ ದೇಶದಲ್ಲಿ ಯಾವುದೇ ಹೊಸ ಕಾನೂನು – ನಿಯಮಗಳು ಜಾರಿಯಾದರೂ ಅದು ಸಂವಿಧಾನಬದ್ಧವಾಗಿರಬೇಕು ಮತ್ತು ಸಂವಿಧಾನದ ಹಿತ ಕಾಪಾಡುವಂತಿರಬೇಕು. ದೇಶದ ಯಾವುದೇ ಕೋರ್ಟ್– ಕಛೇರಿ, ಸರಕಾರಿ ಕೇಂದ್ರಗಳೇ ಆಗಲಿ ಸಂವಿಧಾನದ ಆಶಯದಂತೆಯೇ ಕಾರ್ಯ ನಿರ್ವಹಿಸಬೇಕಿದೆ. ಯಾವುದೇ ಕಾನೂನು ಸಂವಿಧಾನ ಆಶಯದ ವಿರುದ್ಧವಾಗಿ ಹೋಗುವಂತಿಲ್ಲ.

ಹಿಂದೆ ಚೀನಾ ದೇಶವನ್ನು ಯಂಗ್ ಚೀನಾ ಎಂದು ಕರೆಯುತ್ತಿದ್ದರು ಮತ್ತು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಚೀನಾ ದೇಶದಲ್ಲಿದ್ದರು. ಆದರೆ ಇಂದು ಭಾರತವನ್ನು ಯಂಗ್ ಇಂಡಿಯಾ ಎಂದು ಗುರುತಿಸುತ್ತಾರೆ. ಒಟ್ಟು ಜನಸಂಖ್ಯೆಯ ಶೇಕಡಾ 65ರಷ್ಟು ದುಡಿಯುವ ವರ್ಗ ನಮ್ಮ ದೇಶದಲ್ಲಿದ್ದಾರೆ. ಇವರೆಲ್ಲರನ್ನು ಭವಿಷ್ಯದ ನಾಯಕರನ್ನಾಗಿ ರೂಪುಗೊಳಿಸಲು ಸಾಂವಿಧಾನಿಕ ತತ್ತ್ವಗಳಿಂದ ಮಾತ್ರ ಸಾಧ್ಯ. ಯುವಕರು ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಬೆಳೆಯಲು ಸಂವಿಧಾನದಲ್ಲಿ ಹೇಳಿರುವ ರಾಜ್ಯ ನಿರ್ದೇಶಕ ತತ್ವಗಳನ್ನು ಅರಿತುಕೊಳ್ಳುವುದು ಅವಶ್ಯವಾಗಿದೆ. ಸಾಮಾನ್ಯ ಪ್ರಜೆಯಿಂದ ಹಿಡಿದು ಈ ರಾಷ್ಟ್ರದ ಪ್ರಥಮ ಪ್ರಜೆಯವರೆಗೂ ಪ್ರತಿಯೊಬ್ಬರೂ ಮಾಡಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸಂವಿಧಾನ ನೆನಪಿಸುತ್ತದೆ. ಸಂವಿಧಾನ ವಿಧಿ 17 ರಲ್ಲಿ ಅಸ್ಪೃಶ್ಯತೆ ಕುರಿತಾಗಿ ವಿವರಿಸಲಾಗಿದ್ದು ಪ್ರಸ್ತುತ ಭಾರತ ಬೆಳೆಯುತ್ತಿರುವ ವೇಗಕ್ಕೆ ಈ ರೀತಿಯ ಆಚರಣೆ ಬಹುದೊಡ್ಡ ಪಿಡುಗಾಗಿ ಕಾಡಬಹುದು. ವಿದ್ಯಾವಂತ ಯುವ ಸಮುದಾಯವು ಇವೆಲ್ಲವನ್ನು ಮೆಟ್ಟಿ ಮುಂದುವರಿಯಬೇಕು.

### ಅಭಿವ್ಯಕ್ತಿ ಸ್ವಾತಂತ್ರ್ಯ ಮಿತಿಯಲ್ಲಿರಲಿ:

ಯುವಜನತೆ ವಿದ್ಯಾವಂತರಾದ ಕೂಡಲೇ ನನಗೆ ಸ್ವಾತಂತ್ರ್ಯವಿದೆ, ನನಗೆ ಹಕ್ಕುಗಳಿವೆ, ನನ್ನಲ್ಲಿ ಕಾನೂನು ಶಕ್ತಿಯಿದೆ, ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಹೇಳುವುದು ಸಂವಿಧಾನಾತ್ಮಕವಾದುದ್ದೆ! ಭಾರತದ ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು 19(1)(ಎ)ನೇ ವಿಧಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ತನಗೆ ಹಕ್ಕು ಇದೆ ಎಂದ ಮಾತ್ರಕ್ಕೆ ತಾನು ಆಡಿದ್ದು – ಮಾಡಿದ್ದೆಲ್ಲ ಸಿಂಧು ಆಗಲಾರದು. ಸಂವಿಧಾನ ಹಕ್ಕುಗಳನ್ನು ನೀಡುವುದರ ಜೊತೆಗೆ ಕೆಲವೊಂದು ಮಿತಿಗಳನ್ನೂ ಜೋಡಿಸಿಕೊಂಡಿದೆ. ರಾಷ್ಟ್ರೀಯ ಭದ್ರತೆಯ ವಿಚಾರ ಬಂದಾಗ, ಸಾರ್ವಜನಿಕ ಕ್ರಮಗಳಲ್ಲಿ, ಸಾಮಾಜಿಕ ನೀತಿಯಲ್ಲಿ, ನ್ಯಾಯಾಯುತ ಪ್ರಕ್ರಿಯೆಯಲ್ಲಿ, ಧಾರ್ಮಿಕ ನಂಬಿಕೆಗಳ ವಿಚಾರ ಬಂದಾಗ ಯುವಜನತೆ ವಿಚಾರಗಳನ್ನು ವಿಶ್ಲೇಷಿಸಿ ತಮ್ಮ ಸ್ವಾತಂತ್ರ್ಯವನ್ನು ವ್ಯಕ್ತಪಡಿಸಬಹುದು. ಸಂವಿಧಾನ ಓದಿನ ಕುರಿತಾಗಿ ಇಂದು ಸಮಾಜ ಜಾಗೃತ ಆಗಬೇಕಿದೆ, ಶಾಲಾ – ಕಾಲೇಜುಗಳು ತಮ್ಮ ಪಠ್ಯಗಳಲ್ಲಿ ಸಂವಿಧಾನದ ಪ್ರಾರಂಭಿಕ ಜ್ಞಾನವನ್ನು ನೀಡಬೇಕು, ಮಾಧ್ಯಮ, ದೃಶ್ಯ, ಅಕ್ಷರ ಮಾಧ್ಯಮಗಳು ಇದರ ಕುರಿತಾದ ಧನಾತ್ಮಕ ಸಂಗತಿಗಳನ್ನು ಬಿತ್ತರಿಸಬೇಕು. ಒಬ್ಬ ಪ್ರಜೆಯನ್ನು ನಾಗರಿಕ ಶಿಷ್ಟಾಚಾರ ಪಾಲಿಸುವಂತೆ ಮಾಡುವುದೇ ನಾವು ಸಂವಿಧಾನಕ್ಕೆ ನೀಡುವ ಗೌರವವಾಗಿದೆ.

ಈ ನೆಲದ ಸಂಸ್ಕೃತಿಯಂತೆ ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಸಹಬಾಳ್ವೆ ಮತ್ತು ರಾಷ್ಟ್ರೀಯ ಒಗ್ಗೂಡುವಿಕೆ. ಬಡವ–ಬಲ್ಲಿದ, ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಮೇಲ್ಜಾತಿ–ಕೀಲ್ಜಾತಿ ಎನ್ನುವ ಧಾರ್ಮಿಕ ಸ್ವಾತಂತ್ರ್ಯದ ಉಲ್ಲೇಖವನ್ನು ಸಂವಿಧಾನ ವಿಧಿ 25 ರಿಂದ 28ರ ತನಕ ವಿವರಿಸಲಾಗಿದೆ. ಆದ್ದರಿಂದ ಸಂವಿಧಾನ ಈ ನೆಲದ ಮೂಲ ಸಂಸ್ಕೃತಿಯ ಕೈಗನ್ನಡಿಯಾಗಿದೆ.

ರಾಷ್ಟ್ರೀಯ ಪುರುಷರ ಜೀವನದ ಸಂಗತಿಗಳು ಮತ್ತು ಅವರು ನಡೆದ ದಾರಿಯನ್ನೇ ಆಧಾರವಾಗಿಟ್ಟುಕೊಂಡು ಸಂವಿಧಾನದ ಮೂಲಕ ಹೊರತರಲಾಗಿದೆ. ಇಂದು ಸಂವಿಧಾನ ಎನ್ನುವುದು ಬರೇ ಕಾನೂನುಗಳ ಸಂತೆಯಲ್ಲ ಅದು ಸಾಮಾಜಿಕ ಜೀವನ ಮೌಲ್ಯವಾಗಿದೆ. ಅದಕ್ಕಾಗಿಯೇ ಮೂಲ ಸಂವಿಧಾನದಲ್ಲಿ ಈ ನಾಡಿನ ಮೌಲ್ಯಗಳ ಮೂರ್ತರೂಪವೇ ಆದ ಶ್ರೀರಾಮ ಮತ್ತು ಶ್ರೀಕೃಷ್ಣರ ಚಿತ್ರಗಳನ್ನು ನೀಡಿರುವುದು. ಅವರುಗಳು ತೋರಿದ ಮಾರ್ಗವನ್ನೇ ಪಾಲಿಸುತ್ತಾ ರಾಷ್ಟ್ರಧರ್ಮವನ್ನು ಉಳಿಸುವುದಕ್ಕಾಗಿ ಸಂವಿಧಾನವನ್ನು ರಚಿಸಲಾಗಿದೆ.

ಭಾರತದ ಸಂವಿಧಾನ – ಇದು ನನ್ನ ಸಂವಿಧಾನ ಎನ್ನುವ ಭಾವನೆ ಈ ನೆಲದ ಪ್ರತಿ ಪ್ರಜೆಗೂ ಬರಬೇಕು. ಸ್ವಾತಂತ್ರ್ಯ, ಸಮತೆ, ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾಸತ್ತಾತ್ಮಕತೆ, ಗಣರಾಜ್ಯ ವ್ಯವಸ್ಥೆಯನ್ನು ಒಪ್ಪಿಕೊಂಡು ಈ ವಿಶಾಲ ಸಂವಿಧಾನವನ್ನು 26 ಜನವರಿ 1950ರಂದು ನಮ್ಮದಾಗಿಸಿಕೊಂಡಿದ್ದೇವೆ. ಅಂತಹ ಶ್ರೇಷ್ಠವಾದ ಸಂವಿಧಾನವನ್ನು ಪಡೆದು ಇಂದಿಗೆ 75 ವರ್ಷಗಳು ಸಂದಿವೆ. ಭಾರತ ಸ್ವಾತಂತ್ರ್ಯಗೊಂಡು 100ನೇ ವರ್ಷ ಆಚರಿಸುವ ಹೊತ್ತಿಗೆ ಸಂವಿಧಾನವನ್ನು ನಿಜ ರೀತಿಯಲ್ಲಿ ಅರ್ಥೈಸಿಕೊಂಡು, ಅದಕ್ಕನುಸಾರವಾಗಿ ಜೀವನವನ್ನು ಸಾಗಿಸುವ ಮೂಲಕ ಸಮರ್ಥ ರಾಷ್ಟ್ರವನ್ನು ಕಟ್ಟುವ ಪ್ರಯತ್ನಗಳಾಗಬೇಕು. ■

## ಸಂಸ್ಮರಣೆ

# ಭಾರತೀಯ ನೌಕಾ ದಿನ (ಡಿಸೆಂಬರ್ 4)

ಸುಭದ್ರ ಭಾರತಕ್ಕಾಗಿ ಟೊಂಕಕಟ್ಟಿ ನಿಂತವರಲ್ಲಿ ಸೇನೆ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಭೌಗೋಳಿಕವಾಗಿ ಮೂರು ಕಡೆಗಳಲ್ಲಿ ಸಮುದ್ರವನ್ನು ಹೊಂದಿರುವ ಭಾರತವನ್ನು ಜಲಗಡಿಗಳಿಂದ ಎದುರಾಗಬಹುದಾದ ಸಮಸ್ಯೆಗಳನ್ನು, ಸವಾಲುಗಳನ್ನು ನಿವಾರಿಸುವಲ್ಲಿ ತನ್ನನ್ನೇ ಸಮರ್ಪಿಸಿಕೊಂಡಿರುವುದು ನೌಕಾ ಸೇನೆ.

ಭಾರತೀಯ ನೌಕಾಪಡೆಯು ಭಾರತೀಯ ರಕ್ಷಣೆ ಪಡೆಗಳ ಒಂದು ಅಂಗವಾಗಿದೆ. ಅದರಲ್ಲೂ ನಮ್ಮ ನೌಕಾಪಡೆ ಜಗತ್ತಿನ ಐದನೆಯ ಅತಿದೊಡ್ಡ ನೌಕಾಪಡೆಯಾಗಿದೆ. ಭಾರತೀಯ ನೌಕಾಪಡೆ 155 ನೌಕೆಗಳನ್ನು ಹೊಂದಿದ್ದು, ಬಲಿಷ್ಠವಾದ ಐ.ಎನ್.ಎಸ್.ವಿರಾಟ್ ಎಂಬ ವಾಯು ಯುದ್ಧ ನೌಕೆಯನ್ನು ಹೊಂದಿದೆ. ಸಂಪೂರ್ಣ ಏಷ್ಯಾ ಖಂಡದಲ್ಲಿರುವ ಎರಡು ವಾಯು ಯುದ್ಧ ನೌಕೆಗಳಲ್ಲಿ ಇದು ಒಂದು. ಅಲ್ಲಿ ಎರಡು ಸಾವಿರಕ್ಕೂ ಹೆಚ್ಚು ನೌಕಾ ಕಮಾಂಡೋಗಳಿದ್ದಾರೆ. ಪ್ರಪಂಚದ ವಿವಿಧ ದೇಶಗಳು ಭಾರತದ ನೌಕಾಪಡೆಯ ಶಕ್ತಿ ಪ್ರದರ್ಶನವನ್ನು ನೋಡಿ ಕೈ ಮೇಲೆ ಬೆರಳಿಟ್ಟು ಕುಳಿತುಕೊಳ್ಳುತ್ತವೆ.

ಬಹುತೇಕರಿಗೆ ನೆನಪಿರುವಂತೆ ಸರಿಯಾಗಿ 52 ವರ್ಷಗಳ ಹಿಂದೆ ಇಂಡೋ– ಪಾಕ್ ಯುದ್ಧದ ಸಂದರ್ಭದಲ್ಲಿ ಕೊನೆಕೊನೆಗೆ ಪಾಕಿಸ್ತಾನವು ಸೋಲಿನ ಭೀತಿ ಅನುಭವಿಸಿತು. ಸೋಲಿನಿಂದ ಹತಾಶರಾಗಿದ್ದ ಪಾಕಿಗಳು ಭಾರತವನ್ನು ಹೇಗಾದರೂ ಹಿಮ್ಮೆಟ್ಟಿಸಬೇಕು ಎಂದು ನಿರ್ಧರಿಸಿ ತನ್ನ ಕೆಟ್ಟ ಚಾಳಿಯಿಂದ ಒಂದು ಕಳ್ಳ ದಾರಿಯನ್ನು ಹಿಡಿಯಿತು. ಅದೇನೆಂದರೆ 1971ರ ಡಿಸೆಂಬರ್ ಮೂರರ ಸಂಜೆ ಇದ್ದಕ್ಕಿದ್ದಂತೆ ಭಾರತೀಯ ವಾಯು ನೆಲೆಗಳ ಮೇಲೆ ಆಕ್ರಮಣ ಪ್ರಾರಂಭಿಸಿತು. ಅದಕ್ಕೆಲ್ಲ ಕ್ಯಾರೆ ಎನ್ನದ ಭಾರತವು ಸ್ವಲ್ಪವೂ ವಿಚಲಿತವಾಗದೆ ಪಾಕಿಸ್ತಾನದ ದಾಳಿಗೆ ಪ್ರತ್ಯುತ್ತರವಾಗಿ ನಿರ್ಘಾಟ್, ವೀರ್ ಮತ್ತು ನಿಪತ್ ಎನ್ನುವ ಮೂರು ಕ್ಷಿಪಣಿ ದೋಣಿಗಳನ್ನು ಕರಾಚಿ ಕಡೆಗೆ ರವಾನಿಸಿತು. ಅಷ್ಟೇ ಅಲ್ಲದೆ ಆಪರೇಷನ್ ಟ್ರೈಡೆಂಟ್ ಸಮಯದಲ್ಲಿ ಭಾರತೀಯ ನೌಕಾಪಡೆಯು PNS ಖೈಬರ್ ಸೇರಿದಂತೆ ನಾಲ್ಕು ಪಾಕಿಸ್ತಾನಿ ಹಡಗುಗಳನ್ನು ಹಿಂದು ಮುಂದು ನೋಡದೆ ಮುಳುಗಿಸಿತು. ಜತೆಗೆ ನೂರಾರು ಪಾಕಿಸ್ತಾನಿ ನೌಕಾಪಡೆ ಸಿಬ್ಬಂದಿಗಳನ್ನು ಕೊಂದು ಹಾಕಲಾಯಿತು. ಅಲ್ಲಿಗೆ ಪಾಕಿಗಳ ಸೊಕ್ಕು ನೆಲ ಕಚ್ಚಿತು. ಭಾರತದ ನೌಕಾಪಡೆಯ ಅಂದಿನ ಮಹತ್ವದ ಸಾಧನೆಯನ್ನು ಭಾರತೀಯರು ನೆನಪಿಸಿಕೊಳ್ಳಬೇಕು ಎಂಬ ಸಲುವಾಗಿ ಪ್ರತಿ ವರ್ಷ ಡಿಸೆಂಬರ್ ನಾಲ್ಕರಂದು ನೌಕಾಪಡೆಯ ದಿನವನ್ನು ಆಚರಿಸಲಾಗುತ್ತಿದೆ. 1971ರ ಆಪರೇಷನ್ ಟ್ರೈಡೆಂಟ್ ಸಾಹಸವು ಈ ಕ್ಷಣಕ್ಕೂ ರೋಮಾಂಚನವನ್ನು ಉಂಟು ಮಾಡುತ್ತದೆ.


### ಭಾರತೀಯ ನೌಕಾಪಡೆ ಮತ್ತು ಛತ್ರಪತಿ ಶಿವಾಜಿ

ಈ ನೆಲದ ಸಾಹಸಿ ಮಹಾರಾಜ ಶಿವಾಜಿ ಭಾರತೀಯ ನೌಕಾಪಡೆಯ ಪಿತಾಮಹ. ಇತ್ತೀಚಿಗಷ್ಟೇ ನೌಕಾಪಡೆಯ ಧ್ವಜದಲ್ಲಿ ಶಿವಾಜಿ ಮಹಾರಾಜರ ರಾಜ ಮುದ್ರೆಯನ್ನು ಹಾಕಲಾಗಿದೆ. ಅಷ್ಟಕ್ಕೂ ದೇಶಕ್ಕೆ ಸ್ವಾತಂತ್ರ್ಯ ಲಭಿಸುವವರೆಗೂ ಸೇಂಟ್ ಜಾರ್ಜ್ ಕ್ರಾಸ್ ಎನ್ನಲಾಗುವ ಕೆಂಪು ಬಣ್ಣದ ಪ್ಲಸ್ ಆಕಾರದ ಒಂದು ಮೂಲೆಯಲ್ಲಿ ಬ್ರಿಟನ್ ಧ್ವಜವನ್ನು ಅಳವಡಿಸಲಾಗಿತ್ತು. 1950ರಲ್ಲಿ ಯೂನಿಯನ್ ಜಾಕ್ ಸ್ಥಳದಲ್ಲಿ ಭಾರತದ ರಾಷ್ಟ್ರಧ್ವಜವನ್ನು ನೌಕಾಪಡೆಗೆ ಅಳವಡಿಸಿದರು. ಮತ್ತೆ 2001ರಲ್ಲಿ ತ್ರಿವರ್ಣ ಧ್ವಜವನ್ನು ಉಳಿಸಿಕೊಂಡು ಸೇಂಟ್ ಜಾರ್ಜ್ ಕ್ರಾಸ್ ತೆಗೆಯಲಾಯಿತು. ಒಂದು ಕಡೆಗೆ ನೌಕಾದಳದ ಲಾಂಛನವನ್ನು ಅಳವಡಿಸಲಾಯಿತು. 2004ರಲ್ಲಿ ಮತ್ತೆ ಹಿಂದಿನ ಸ್ಥಿತಿಗೆ ಧ್ವಜದ ಸ್ವರೂಪ ಬದಲಾಯಿತು. ಆದರೆ ಇದೀಗ ಮತ್ತೆ ನೌಕಾದಳದ ಲಾಂಛನವನ್ನು ಸೇರ್ಪಡೆ ಮಾಡಿ ಸೇಂಟ್ ಜಾರ್ಜ್ ಕ್ರಾಸ್ ಅನ್ನು ತೆಗೆದುಹಾಕಲಾಗಿದೆ. ಈಗ ಹೊಸ ಧ್ವಜದಲ್ಲಿ ಒಂದು ಮೂಲೆಯಲ್ಲಿ ತ್ರಿವರ್ಣ ಧ್ವಜವಿದ್ದರೆ ಮತ್ತೊಂದು ಮೂಲೆಯಲ್ಲಿ ನೌಕಾದಳದ ಲಾಂಛನವಿದೆ. ಇದರಲ್ಲೂ ಬದಲಾವಣೆ ಮಾಡಲಾಗಿದ್ದು, ಹಿನ್ನೆಲೆ ಬಣ್ಣವಾಗಿ ನೇವಿ ಬ್ಲೂ ಬಳಸಲಾಗಿದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಈ ಭಾಗದ ಆಕಾರವನ್ನು ಅಷ್ಟಕೋನವಾಗಿ ರೂಪಿಸಲಾಗಿದೆ. ಅಷ್ಟಕೋನ ಎನ್ನುವುದು, ಅಷ್ಟ ದಿಕ್ಕುಗಳಲ್ಲೂ ಸಮುದ್ರವನ್ನು ಕಾಯುವ ಸಂಕಲ್ಪವನ್ನು ಮೂಡಿಸುತ್ತದೆ. ವಿಶೇಷವೆಂದರೆ ಛತ್ರಪತಿ ಶಿವಾಜಿ ಮಹಾರಾಜರ ರಾಜಮುದ್ರೆಯೂ ಇದೇ ಅಷ್ಟಕೋನಾಕಾರವನ್ನು ಹೊಂದಿತ್ತು. ಶಿವಾಜಿ ಮಹಾರಾಜರ ಶೌರ್ಯ ಮತ್ತು ಸಾಧನೆಗಳನ್ನು ನೆನಪು ಮಾಡಿಕೊಂಡು ಅವರಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಧ್ವಜದಲ್ಲಿ ಶಿವಾಜಿ ಮಹಾರಾಜರ ರಾಜ ಮುದ್ರೆಯನ್ನು ಸೇರಿಸಲಾಗಿದೆ. ಅಂದು ಭಾರತದ ನೌಕಾಪಡೆಯ ಆತ್ಮಬಲವನ್ನು ಹೆಚ್ಚಿಸಿದ್ದ ಶಿವಾಜಿ ಮಹಾರಾಜರು, ಇಂದು ಮತ್ತೊಮ್ಮೆ ಪ್ರೇರಣಾ ಸ್ರೋತವಾಗಿ ಆತ್ಮನಿರ್ಭರ ನೌಕೆಯನ್ನು ರೂಪಿಸುವುದಕ್ಕೆ ಸ್ಫೂರ್ತಿಯಾಗಿ ನಿಂತಂತಿದೆ.

## ಸಂವಿಧಾನ ಬದಲಾಯಿಸಿದ್ದು ಯಾರು?

**ಪುಸ್ತಕ ಪರಿಚಯ**

**ಲೇಖಕರು:** ವಿಕಾಸ್ ಕುಮಾರ್ ಪುತ್ತೂರು
**ಬೆಲೆ:** 250ರೂ
**ಪ್ರಕಾಶನ:** ಅಯೋಧ್ಯಾ ಪ್ರಕಾಶನ




ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚನೆಯಾದ ಸಂವಿಧಾನ ಅನಂತರದ ದಿನಗಳಲ್ಲಿ ಬಂದಂತಹ ಎಲ್ಲಾ ಸರ್ಕಾರಗಳ ಅವಧಿಯಲ್ಲಿ ಹಲವು ಬಾರಿ ಬದಲಾವಣೆಗೆ ಒಳಗಾಯಿತು. ಸಂವಿಧಾನವನ್ನು ಮನಸ್ಸಿಗೆ ಬಂದಂತೆ ಬದಲಾಯಿಸುವ ಕೆಲಸವೂ ನಡೆಯಿತು. ಆದರೆ ಇಂದು, ಸಂವಿಧಾನವನ್ನು ರಕ್ಷಿಸುವ ಹೊಣೆ ಹೊತ್ತ ಸರಕಾರ ಮತ್ತು ವ್ಯಕ್ತಿಗಳ ಮೇಲೆಯೇ 'ಸಂವಿಧಾನದ ಕೊಲೆಗಾರರು' ಎಂಬ ನರೇಟಿವ್ ಕಟ್ಟಲಾಗುತ್ತಿದೆ. ಸಂವಿಧಾನವನ್ನು ಬರೆದ ಡಾ. ಅಂಬೇಡ್ಕರರ ಆಶಯಗಳೇನಿತ್ತು? ಅವರು ಸಂಸತ್ತಿನಲ್ಲಿ ಮಾಡಿದ ಭಾಷಣಗಳ ಪೂರ್ಣಪಾಠ ಏನು? ಸಂವಿಧಾನ ರಚನೆಯ ಪ್ರಕ್ರಿಯೆ ಹೇಗಿತ್ತು? ಬಾಬಾಸಾಹೇಬರನ್ನು ಯಾವ್ಯಾವ ರೀತಿಯಲ್ಲಿ ದಮನಿಸಲು ಪ್ರಯತ್ನಿಸಲಾಯಿತು? ಸಂವಿಧಾನದ ತಿದ್ದುಪಡಿಯ ಹೆಸರಿನಲ್ಲಿ ಏನೇನು ಅಜೆಂಡಗಳನ್ನು ತುರುಕಲಾಯಿತು? ಬಾಬಾಸಾಹೇಬರ ಆಶಯವನ್ನು ರಕ್ಷಿಸುವ ಬಗೆ ಹೇಗೆ? – ಈ ಎಲ್ಲ ವಿಚಾರಗಳನ್ನು ಅತ್ಯಂತ ಸ್ಪಷ್ಟವಾಗಿ, ಅಧ್ಯಯನಪೂರ್ಣವಾಗಿ, ವಿಸ್ತೃತವಾಗಿ ಕಟ್ಟಿಕೊಟ್ಟಿರುವ ಕೃತಿಯೇ 'ಸಂವಿಧಾನ ಬದಲಾಯಿಸಿದ್ದು ಯಾರು?'. ಸಂವಿಧಾನರಚನೆಯ ವಜ್ರಮಹೋತ್ಸವ ಸಂದರ್ಭದಲ್ಲಿ ಇದು ಬಾಬಾಸಾಹೇಬ್ ಡಾ. ಅಂಬೇಡ್ಕರರ ವ್ಯಕ್ತಿತ್ವ–ಸಾಧನೆಗಳಿಗೆ ಅರ್ಪಿಸಿರುವ ಸಾರ್ಥಕ ಕೃತಿಯಾಗಿದೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಕೃತಿ ವಿವೇಕ ಪಾಲಿಸಿ

**ನಾಗರಿಕ ಶಿಷ್ಟಾಚಾರ**

ಎಲ್ಲಿ, ಯಾವ ಕೆಲಸವನ್ನು, ಹೇಗೆ ಮಾಡಬೇಕು ಎಂಬ ಅರಿವು ಇರುವುದನ್ನು ಕೃತಿ ವಿವೇಕ ಎನ್ನಲಾಗುತ್ತದೆ. ದಿನನಿತ್ಯದ ಬದುಕಿನಲ್ಲಿ ನಾವು ವಿವಿಧ ಸ್ಥಳಗಳಲ್ಲಿ ಸಾಮಾಜಿಕವಾಗಿ ವ್ಯವಹರಿಸುವ ಸನ್ನಿವೇಶಗಳು ಎದುರಾಗುತ್ತವೆ. ನಮ್ಮ ವೃತ್ತಿಯಲ್ಲಿ, ನಮ್ಮ ಪ್ರವೃತ್ತಿಯ ಭಾಗವಾಗಿ ನಾವು ಮಾಡುವ ಕೆಲಸಗಳಲ್ಲಿ ಹೆಚ್ಚು ಗಮನವಹಿಸಿ ಕೆಲಸ ಮಾಡಬೇಕು. ಹಾಗೆಯೇ ಯಾವ ಕೆಲಸವನ್ನು ಎಲ್ಲಿ ಮಾಡಬೇಕು ಎಂಬುದೂ ಗೊತ್ತಿರಬೇಕು. ನಮಗೆ ಕೊಟ್ಟಿರುವ ಕೆಲಸವನ್ನು ಅರಿತು ಅದನ್ನು ಹೇಗೆ ಅಚ್ಚುಕಟ್ಟಾಗಿ ಮಾಡಬೇಕು ಎನ್ನುವುದನ್ನೂ ಅರಿತಿರಬೇಕು.



## ಕನಸಿನ ಒಂದು ಮನೆ ಇರಲಿ

ಕೇರಳದ ಪುಟ್ಟ ಗ್ರಾಮವಾದ ಇರಿಂಜಾಲಕುಡಾದಲ್ಲಿ ವಾಸಿಸುವ ಶಂಸಾದ್ ಕಡುಬಡತನದಲ್ಲಿ ಬೆಳೆದಾತ. ಅಂಗವಿಕಲ ತಾಯಿ–ತಂದೆಯ ಜೊತೆಗೆ ಒಂದು ಬಾಡಿಗೆ ಕೊಠಡಿಯಲ್ಲಿ ದಿನ ಕಳೆಯುತ್ತಿದ್ದ ಈ ಶಂಸಾದ್ ತನಗೂ ಒಂದು ಸ್ವಂತ ಮನೆ ಹೊಂದುವ ಯೋಗ ಬರುವುದೆಂದು ಕನಸಿನಲ್ಲಿಯೂ ಕೂಡ ಯೋಚಿಸಿರಲಿಲ್ಲ. ಈಗ ಅವರಲ್ಲಿ ಸ್ವಂತ ಭೂಮಿ ಇದೆ ಮಾತ್ರವಲ್ಲ ಬೇಗನೇ ಮನೆಯೂ ಕೂಡ ನಿರ್ಮಾಣವಾಗಲಿದೆ. ಸೇವಾಭಾರತಿ ಇರಿಂಜಾಲಕುಡಾ ತಂಡದ ಸತತ ಪರಿಶ್ರಮದಿಂದ ಇದೇ ರೀತಿಯಾಗಿ 24 ಪರಿವಾರದವರಿಗೆ ಸೂರು ಸಿಕ್ಕಿದೆ.




ಈಗ ತಾವೆಲ್ಲರೂ ಮೇಲೆ ಯಾವ ವಿಷಯವನ್ನು ಓದಿದ್ದೀರೋ ಅದು ದಂತಕತೆಯಲ್ಲ, ವಾಸ್ತವವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ನಿರಂತರವಾದ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಇರಿಂಜಾಲಕುಡಾದ ಸ್ವಯಂಸೇವಕರ ತಂಡವು ಯಶಸ್ವಿ ಉದ್ಯೋಗಿಯಾದ ಪಿ.ಸುಂದರಂ ಅವರಲ್ಲಿ ಸೇವಾಕಾರ್ಯಗಳಿಗೆ ಧನಸಹಾಯವನ್ನು ಯಾಚಿಸಲು ಹೋದಾಗ ಈ ವಾಸ್ತವ ಸಾಕಾರಗೊಂಡಿತು. ಸ್ವಲ್ಪ ಹೊತ್ತಿನ ಮಾತುಕತೆಯ ನಂತರ ಅವರೆಲ್ಲರೂ ಆಶ್ಚರ್ಯಚಕಿತರಾದರು. ಮಾರುಕಟ್ಟೆ ಬೆಲೆ 75 ಲಕ್ಷ ಇರುವ 21777 Sq.ft. ಭೂಮಿಯನ್ನು ಅಂಗವಿಕಲರಿಗೆ ಮನೆ ಕಟ್ಟಲು ಸಂಘದ ಮೂಲಕ ದಾನ ಮಾಡಲು ಇಚ್ಛಿಸುತ್ತೇನೆ ಎಂದು ಸುಂದರಮ್ ಅವರು ಹೇಳಿದರು. ಇಲ್ಲಿಂದಲೇ ಇವರ ಈ ಪರಿಶ್ರಮಕ್ಕೆ ರೆಕ್ಕೆ ಮೂಡಿತು. ಸುಂದರಮ್ ಅವರಿಂದ ಪ್ರಭಾವಿತರಾಗಿ ಸಮೀಪದ ಮುರಿಯಾದ್ ಪಂಚಾಯತಿನ ಇಲಾಖೆಯ ಒಬ್ಬ ಶ್ರೀಮಂತ ವಿಧವೆ ವನಜಾ ಇಂದಾವನ್ ಕೂಡ ತಮ್ಮ 48 ಲಕ್ಷ ಬೆಲೆಯ 19600 Sq.ft. ಭೂಮಿಯನ್ನು ಸಂಘದ ಸ್ವಯಂಸೇವಕರ ಮೂಲಕ ಅಗತ್ಯವಿರುವವರಿಗೆ ದಾನಮಾಡುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಈ ಭೂದಾನದಿಂದ ತಮ್ಮ ಸೇವೆಗೆ ಹೊಸ ಆಯಾಮ ಸಿಕ್ಕಿತು ಎಂದು ಕೇರಳದ ಇರಿಂಜಾಲಕುಡಾ ಸೇವಾಭಾರತಿಯ ಕಾರ್ಯದರ್ಶಿ ಪಿ. ಹರಿದಾಸ್ ತಿಳಿಯುತ್ತಾರೆ.

ಬಹಳ ಪರಿಶ್ರಮದಿಂದ ಮನೆಯಿಲ್ಲದ 24 ಬಡ ಅಂಗವಿಕಲರನ್ನು ಗುರುತಿಸಿ ಆಯ್ಕೆಮಾಡಿ ಯಾರಲ್ಲಿ ಮನೆ ಇಲ್ಲವೋ ಅವರಿಗೆ ನೀಡಲಾಯಿತು. ಕೊನೆಯಲ್ಲಿ ಒಂದು ಸಮಾರೋಪ ಸಮಾರಂಭವನ್ನು ಆಯೋಜಿಸಿ ಸುಂದರಂ ಮತ್ತು ವನಜಾ ಇಂದಾವನ್ ಉಪಸ್ಥಿತಿಯಲ್ಲಿ ಮಲಯಾಳದ ಸುಪ್ರಸಿದ್ಧ ಸಿನಿಮಾ ನಟ ಮತ್ತು ರಾಜ್ಯಸಭಾ ಸದಸ್ಯರಾದ ಶ್ರೀ ಸುರೇಶ್ ಗೋಪಿಯವರು ಈ ಭಾಗ್ಯಶಾಲಿಗಳಾದ 24 ಜನರಿಗೆ 3.10 ಸೆಂಟ್ಸ್ (1348 Sq.ft.) ಸಮಾನವಾಗಿ ಗುರುತು ಮಾಡಿದ ಪ್ಲಾಟ್‌ನ ಭೂಮಿಯ ದಾಖಲೆ ಪತ್ರಗಳನ್ನು ನೀಡಿದರು. ಈ ದಾಖಲೆ ಪತ್ರದ ಪ್ರಕಾರ ಅವರು ಆ ಭೂಮಿಯನ್ನು ಮುಂದಿನ ಹತ್ತು ವರ್ಷಗಳವರೆಗೆ ಬೇರೆಯವರಿಗೆ ಹಸ್ತಾಂತರಿಸುವಂತಿಲ್ಲ, ಮಾರಾಟ ಮಾಡುವಂತೆಯೂ ಇಲ್ಲ.

ಸರಕಾರಿ ಆಸ್ಪತ್ರೆಯಲ್ಲಿ ಔಷಧಿ ಮತ್ತು ಅಗತ್ಯವಿರುವವರಿಗೆ ಊಟದ ವ್ಯವಸ್ಥೆಯನ್ನು 2007 ರಿಂದಲೇ ಆರಂಭಿಸಿರುವ ಇರಿಂಜಾಲಕುಡಾ ಸೇವಾಭಾರತಿಯು ಕೆಲವೇ ವರ್ಷಗಳಲ್ಲಿ ಸಂಸ್ಥಾಪಕ ಸ್ವಯಂಸೇವಕರಾದ ಪಿ.ಹರಿದಾಸ್ ಪಿ.ಯಂ.ಶಂಕರನ್ ಮತ್ತು ಎ.ವಿಸ್. ಸತೀಶನ್ ಮೊದಲಾದವರ ಸಾಮರ್ಥ್ಯಪೂರ್ಣ ಸಂಚಾಲಕತ್ವದಲ್ಲಿ ಮಾಡಿ ತೋರಿಸಿರುವುದು ಸಾವಿರಾರು ಜನರ ಜೀವನಕ್ಕೊಂದು ನವ ಚೈತನ್ಯ ದೊರೆತಂತಾಗಿದೆ. ಪ್ರಸ್ತುತ ಸೇವಾಭಾರತಿ ಇರಿಂಜಾಲಕುಡಾ ಮೂಲಕ "ಸಂಗಮೇಶ್ವರ ವಾನಪ್ರಸ್ಥಾ ಆಶ್ರಮಂ" ಎಂಬ ಹೆಸರಿನಲ್ಲಿ ವೃದ್ಧಾಶ್ರಮ; ಸೇವಾಶ್ರಮ ನಿಲಯಂ ಹೆಸರಿನಲ್ಲಿ, ಮಾನಸಿಕವಾಗಿ ಹಿಂದುಳಿದವರಿಗೆ ಒಂದು ಡೇ ಕೇರ್ ಸೆಂಟರ್ ಹಾಗೂ ದಿನದ 24 ಗಂಟೆಗಳ ಕಾಲ ಆಂಬುಲೆನ್ಸ್ ಸೇವೆ ಮತ್ತು ಫ್ರೀಜರ್ ವ್ಯವಸ್ಥೆಯನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.

ಸಂಪರ್ಕ: ಜಿತಿನ್ ರಮೇಶ್, 08330083324

**ಸಂಪಾದಕೀಯ ಸಹಕಾರ:** ಪೃಥ್ವೀಶ್ ಧರ್ಮಸ್ಥಳ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಸುಬ್ರಾಯ ನಂದೋಡಿ, ದೀಕ್ಷಿತ್ ನಾಯರ್ ಮಂಡ್ಯ

## ಆತ್ಮನಿರ್ಭರತೆಗೆ ಉತ್ತೇಜಿಸುವ 'ಅಸ್ಮಿ' ಮೆಶಿನ್ ಪಿಸ್ತೂಲ್ ಸೇನೆಗೆ ಸೇರ್ಪಡೆ



ರಾಷ್ಟ್ರದ ಆತ್ಮನಿರ್ಭರ ಉಪಕ್ರಮಕ್ಕೆ ಗಮನಾರ್ಹವಾದ ಉತ್ತೇಜನ ಎಂಬಂತೆ ಭಾರತೀಯ ಸೇನೆಯ ಕರ್ನಲ್ ಪ್ರಸಾದ್ ಬನ್ಸೋಡ್ ಆಖಆಔ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ 550 'ಅಸ್ಮಿ' ಮೆಷಿನ್ ಪಿಸ್ತೂಲ್‌ಗಳನ್ನು ಭಾರತೀಯ ಸೇನೆಯು ತನ್ನ ಉತ್ತರ ಕಮಾಂಡ್‌ಗೆ ಸೇರ್ಪಡೆಗೊಳಿಸಿದೆ. ಈ ಮೆಶಿನ್ ಪಿಸ್ತೂಲ್ ಅನ್ನು ಹೈದರಾಬಾದಿನ ಲೋಕೇಶ್ ಮೆಷಿನ್ ಸಂಸ್ಥೆ ಸ್ಥಳೀಯವಾಗಿ ತಯಾರಿಸುತ್ತಿದೆ. 'ಅಸ್ಮಿ' ಮೆಷಿನ್ ಪಿಸ್ತೂಲ್ ದೃಢವಾದ, ಕಾಂಪ್ಯಾಕ್ಟ್ ಮತ್ತು ವಿಶ್ವಾಸಾರ್ಹ ಆಯುಧವಾಗಿದ್ದು, ನಿಕಟ ಕ್ವಾರ್ಟರ್ ಯುದ್ಧಗಳು ಮತ್ತು ವಿಶೇಷ ಕಾರ್ಯಾಚರಣೆಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಈ 100% ಮೇಡ್-ಇನ್-ಇಂಡಿಯಾ ಮೆಶಿನ್ ಪಿಸ್ತೂಲ್ ಸೇರ್ಪಡೆಯು ರಕ್ಷಣಾ ಉತ್ಪಾದನೆಯಲ್ಲಿ ರಾಷ್ಟ್ರವನ್ನು ಸ್ವಾವಲಂಬನೆಯತ್ತ ಮುನ್ನಡೆಸಲು ಭಾರತೀಯ ಸೇನೆಯ ಅಚಲವಾದ ಬದ್ಧತೆಯನ್ನು ಪ್ರದರ್ಶಿಸುತ್ತದೆ ಎಂದು ಸೇನೆ ಹೇಳಿದೆ.

## ಅರ್ಮೇನಿಯಾಗೆ ಮೊದಲ ಆಕಾಶ್ ವೆಪನ್ ಸಿಸ್ಟಮ್ ಬ್ಯಾಟರಿಯನ್ನು ರಫ್ತು ಮಾಡಿದ ಭಾರತ

ಭಾರತವು ಅರ್ಮೇನಿಯಾಗೆ ಮೊದಲ ಆಕಾಶ್ ವೆಪನ್ ಸಿಸ್ಟಮ್ ಬ್ಯಾಟರಿಯನ್ನು ರಫ್ತು ಮಾಡುವ ಮೂಲಕ ರಕ್ಷಣಾ ರಫ್ತಿನಲ್ಲಿ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಸೇಶನ್ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದ ಆಕಾಶ್ ವೆಪನ್ ಸಿಸ್ಟಮ್, ಫೈಟರ್ ಜೆಟ್‌ಗಳು, ಕ್ರೂಸ್ ಕ್ಷಿಪಣಿಗಳು, ಡ್ರೋನ್‌ಗಳು ಮತ್ತು ಇತರ ವೈಮಾನಿಕ ಬೆದರಿಕೆಗಳನ್ನು 25 ಕಿಲೋಮೀಟರ್ ವ್ಯಾಪ್ತಿಯಲ್ಲಿ ಗುರಿಯಾಗಿಸುವ ಸಾಮರ್ಥ್ಯವಿರುವ ಮೇಲ್ಮೈಯಿಂದ ಗಾಳಿ ಕ್ಷಿಪಣಿ (SAM)ಯಾಗಿದೆ. ಆಕಾಶ್ ಕ್ಷಿಪಣಿ ವ್ಯವಸ್ಥೆಯನ್ನು ರಫ್ತು ಮಾಡಲು ಡಿಸೆಂಬರ್ 2020 ರಲ್ಲಿ ಕೇಂದ್ರ ಸಚಿವ ಸಂಪುಟವು ಅನುಮೋದಿಸಿತು. ಆಕಾಶ್ ಅನ್ನು ಮೊದಲು 2014 ರಲ್ಲಿ ಭಾರತೀಯ ವಾಯುಪಡೆಗೆ ಮತ್ತು 2015ರಲ್ಲಿ ಭಾರತೀಯ ಸೇನೆಗೆ ಸೇರಿಸಲಾಯಿತು. 2022 ರಲ್ಲಿ, ಸುಮಾರು 6,000 ಕೋಟಿ ರೂಪಾಯಿ ಮೌಲ್ಯದ ಒಪ್ಪಂದದಲ್ಲಿ 15 ಆಕಾಶ್ ಸಿಸ್ಟಮ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲು ಅರ್ಮೇನಿಯಾ ಒಪ್ಪಿಕೊಂಡಿತು, ಇದು ಭಾರತದಿಂದ ಈ ವ್ಯವಸ್ಥೆಯನ್ನು ಖರೀದಿಸಿದ ಮೊದಲ ದೇಶವಾಗಿದೆ

# ಸಾಲುದ್ದದ ಸುದ್ದಿಗಳು



## ಸ್ಮಾರ್ಟ್‌ಫೋನ್ ತಯಾರಿಕೆಗಾಗಿರುವ ಕೇಂದ್ರದ ಪಿಎಲ್‌ಐ ಯೋಜನೆ 3 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸಿದೆ: ವರದಿ

ಇಂಡಿಯಾ ಸೆಲ್ಯುಲಾರ್ ಆಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ (ICEA) ಪ್ರಕಾರ, ಸ್ಮಾರ್ಟ್‌ಫೋನ್ ತಯಾರಿಕೆಗಾಗಿ ಕೇಂದ್ರ ಸರ್ಕಾರದ ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ (PLI) ಯೋಜನೆಯು ಪ್ರಭಾವಶಾಲಿ ಫಲಿತಾಂಶಗಳನ್ನು ನೀಡಲಾರಂಭಿಸಿದೆ, FY21 ಮತ್ತು FY24 ರ ನಡುವೆ ಅದರ ಪ್ರೋತ್ಸಾಹ ವಿತರಣೆಯ ಮೌಲ್ಯವನ್ನು 19 ಪಟ್ಟು ಹೆಚ್ಚಿಸಿದೆ. ಅದೇ ಅವಧಿಯಲ್ಲಿ 12.55 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಉತ್ಪಾದಿಸುವ ಸಂದರ್ಭದಲ್ಲಿ ಸ್ಮಾರ್ಟ್‌ಫೋನ್ ಉದ್ಯಮವು ಸರ್ಕಾರದ ಬೊಕ್ಕಸಕ್ಕೆ 1.10 ಲಕ್ಷ ಕೋಟಿ ರೂಪಾಯಿ ಕೊಡುಗೆ ನೀಡಿದೆ ಎಂದು ICEA ತನ್ನ ಮೌಲ್ಯಮಾಪನದಲ್ಲಿ ಬಹಿರಂಗಪಡಿಸಿದೆ. ಸ್ಮಾರ್ಟ್‌ಫೋನ್ PLI ಯೋಜನೆಯು ಗಮನಾರ್ಹ ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ. ಪ್ರಾರಂಭವಾದಾಗಿನಿಂದ, ಇದು ಸುಮಾರು 3 ಲಕ್ಷ ನೇರ ಉದ್ಯೋಗಗಳು ಮತ್ತು 6 ಲಕ್ಷ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ.

## ಸಿಐಎಸ್‌ಎಫ್‌ನ ಮೊದಲ ಸಂಪೂರ್ಣ ಮಹಿಳಾ ಬೆಟಾಲಿಯನ್ ಸ್ಥಾಪನೆಗೆ ಕೇಂದ್ರ ಅನುಮೋದನೆ

ಮಹಿಳೆಯರ ಸಬಲೀಕರಣ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ಅವರ ಪಾತ್ರವನ್ನು ಹೆಚ್ಚಿಸುವ ಮಹತ್ವದ ಗುರಿಯೊಂದಿಗೆ ಸಿಐಎಸ್‌ಎಫ್‌ನ ಮೊದಲ ಸಂಪೂರ್ಣ ಮಹಿಳಾ ಬೆಟಾಲಿಯನ್ ಸ್ಥಾಪನೆಗೆ ಕೇಂದ್ರ ಗೃಹ ಸಚಿವಾಲಯ ಅನುಮೋದನೆ ನೀಡಿದೆ. ಸಿಐಎಸ್‌ಎಫ್ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಬಯಸುವ ಮಹಿಳೆಯರಿಗೆ ಆದ್ಯತೆಯ ಆಯ್ಕೆಯಾಗಿದೆ, ಪ್ರಸ್ತುತ ಪಡೆಯಲ್ಲಿ ಏಳು ಪ್ರತಿಶತಕ್ಕಿಂತಲೂ ಹೆಚ್ಚಿನ ಮಹಿಳೆಯರು ಇದ್ದಾರೆ. ಮಹಿಳಾ ಬೆಟಾಲಿಯನ್ ಸೇರ್ಪಡೆಯಿಂದ ದೇಶಾದ್ಯಂತ ಹೆಚ್ಚು ಉತ್ಸಾಹಿ ಯುವತಿಯರು ಸಿಐಎಸ್‌ಎಫ್‌ಗೆ ಸೇರಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಉತ್ತೇಜನ ಸಿಗುತ್ತದೆ. ಇದು ಸಿಐಎಸ್‌ಎಫ್‌ನಲ್ಲಿರುವ ಮಹಿಳೆಯರಿಗೆ ಹೊಸ ಗುರುತನ್ನು ನೀಡುತ್ತದೆ.

## 5.8 ಕೋಟಿ ನಕಲಿ ಬಿಪಿಎಲ್ ಕಾರ್ಡ್ ರದ್ದು: ಕೇಂದ್ರ




ರೇಷನ್ ಕಾರ್ಡ್‌ಗಳ ಡಿಜಿಟಲೀಕರಣದ ಮೂಲಕ ಪಡಿತರ ವ್ಯವಸ್ಥೆಯಿಂದ 5.8 ಕೋಟಿ ಅಕ್ರಮ ಪಡಿತರ ಚೀಟಿ ರದ್ದುಪಡಿಸಲಾಗಿದೆ ಕೇಂದ್ರ ಸರ್ಕಾರ ಹೇಳಿದೆ. ಜೊತೆಗೆ ಇಂಥ ಕ್ರಮ, ಜಾಗತಿಕ ಆಹಾರ ಭದ್ರತಾ ಖಾತರಿ ಯೋಜನೆ ಜಾರಿಯಲ್ಲಿ ಹೊಸದೊಂದು ಮೈಲುಗಲ್ಲಾಗಿದೆ ಎಂದು ಹೇಳಿದೆ. ಇದೀಗ ಆಧಾರ್ ಆಧರಿತ ದೃಢೀಕರಣ ಮತ್ತು ಎಲೆಕ್ಟ್ರಾನಿಕ್ ಮಾದರಿಯಲ್ಲೇ ನಿಮ್ಮ ಗ್ರಾಹಕರನ್ನು ಅರಿಯಿರಿ (ಇ-ಕೆವೈಸಿ) ಪರಿಶೀಲನೆ ಮೂಲಕ 5.8 ಕೋಟಿ ಅಕ್ರಮ ಪಡಿತರ ಚೀಟಿ ರದ್ದುಪಡಿಸಲಾಗಿದೆ. ಈ ಕೆಲಸವು ಪಡಿತರ ಸೋರಿಕೆ ತಡೆಯುವ ಜೊತೆಗೆ, ಅರ್ಹರಿಗೆ ಆಹಾರ ವಸ್ತುಗಳ ಲಭ್ಯತೆ ಇನ್ನಷ್ಟು ಖಚಿತಪಡಿಸಿದೆ ಎಂದು ಹೇಳಿದೆ.

# 30000 ರೈತರ ಬದುಕಿಗೆ ಆಶಾಕಿರಣವಾದ ಐಎಎಸ್ ಅಧಿಕಾರಿ ಸುಶಾಂತ್ ಗೌರವ್ ಅವರ ವೃತ್ತಿನಿಷ್ಠೆ

ಬದಲಾವಣೆ ಕಾಣಬೇಕೆಂಬ ಆಸೆಯನ್ನು ಹೊತ್ತ ಕಣ್ಣುಗಳಿದ್ದರೆ ಸಾಲದು, ಬದಲಾವಣೆ ತರುವ ಮನಸಿದ್ದು ಅದಕ್ಕಾಗಿ ಹಗಲಿರುಳು ಶ್ರಮಿಸಬೇಕು ಎಂಬ ಪ್ರಾಜ್ಞರ ನುಡಿಯಂತೆ ಅಧಿಕಾರಿಯಾದವರು ತಾವು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರದಲ್ಲಿ ಮನಸ್ಸು ಮಾಡಿದರೆ ಎಂತಹ ಅಭೂತಪೂರ್ವ ಬದಲಾವಣೆಯನ್ನೂ ತರಬಹುದು ಎನ್ನುವುದನ್ನು ಜಾರ್ಖಾಂಡ್‌ನ ಗುಮ್ಲಾ ಜಿಲ್ಲೆಯ ಜಿಲ್ಲಾಧಿಕಾರಿ ಸುಶಾಂತ್ ಗೌರವ್ ತೋರಿಸಿಕೊಟ್ಟಿದ್ದಾರೆ.

ಜಾರ್ಖಂಡ್ ರಾಜ್ಯದ ಗುಮ್ಲಾ ಜಿಲ್ಲೆಯು ಇಂದು 'ರಾಗಿ ಕ್ಯಾಪಿಟಲ್' ಎಂಬುದಾಗಿ ಪರಿವರ್ತನೆಗೊಂಡಿದ್ದು, ಇದಕ್ಕೆ ಮುಖ್ಯ ಕಾರಣ ಐ.ಎ.ಎಸ್ ಅಧಿಕಾರಿಯಾದ ಸುಶಾಂತ್ ಗೌರವ್ ಅವರು. ಅವರ ಕೆಲಸವನ್ನು ಮೆಚ್ಚಿ ಗುಮ್ಲಾದಲ್ಲಿ ತರಲಾದ ಬದಲಾವಣೆಗಳ ಕುರಿತು ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್ 'ಪರಿಣಾಮಕಾರಿ ಸಾರ್ವಜನಿಕ ಆಡಳಿತ'ಕ್ಕೆ ಮಾದರಿಯಾಗಿ ಅಧ್ಯಯನ ಮಾಡುತ್ತಿದೆ. ಇವರ ಅಧ್ಯಯನವು ಅವರ ಆಲೋಚನೆಗಳಿಂದಾಗಿ ಗುಮ್ಲಾದಲ್ಲಿನ ರೈತರುಗಳಿಗೆ ರಾಗಿ ಬೆಳೆಯ ಬಗ್ಗೆ ಪರಿಚಯಿಸಿ ಅಲ್ಲಿನ ಜನರ ಬರಕೃಷಿಯ ಸಂಕಷ್ಟವನ್ನು ದೂರಗೊಳಿಸಿದ್ದಾರೆ. ಇಲ್ಲಿನ ಸುಮಾರು 30,000 ರೈತರು ಸುಶಾಂತ್ ಅವರ ನೇತೃತ್ವದಲ್ಲಿ ಭತ್ತದ ಬೆಳೆಯ ಬದಲಾಗಿ ರಾಗಿ ಬೆಳೆಗಳನ್ನು ಬೆಳೆಯಲು ಮುಂದಾಗಿದ್ದಾರೆ. ಈ ಪ್ರಯತ್ನವು ಅವರ ಆದಾಯವನ್ನು ಹೆಚ್ಚಿಸಿದ್ದು, ಅವರ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಸಹಕಾರಿಯಾಗಿರುವುದು ಸುಶಾಂತ್ ಅವರಿಗೆ ಹೆಮ್ಮೆಯನ್ನು ತಂದುಕೊಟ್ಟಿದೆ.

ಇವರು ಕೇವಲ ರೈತರಿಗೆ ರಾಗಿ ಕೃಷಿಯ ಕುರಿತಾದ ಪರಿವರ್ತನೆಯನ್ನು ಸೂಚಿಸಿರುವುದಲ್ಲದೆ, ತಾವೇ ಕೃಷಿಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಜನರಿಗೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ರೈತರನ್ನು ಪ್ರೇರೇಪಿಸುವಂತೆ ಅವರಿಗೆ ಉತ್ತಮ ಗುಣಮಟ್ಟದ ರಾಗಿ ಬೀಜಗಳನ್ನು ಒದಗಿಸುವ ಹಾಗೂ ವೈಜ್ಞಾನಿಕ



"ನಾವು ಯಾವುದೇ ಕೆಲಸ ಮಾಡುವಾಗ ಆ ಕೆಲಸ ಬಯಸುವ ಶ್ರಮ, ಬದ್ಧತೆ ಮತ್ತು ಶಿಸ್ತಿನ ಜೊತೆಗೆ ಒಗ್ಗಟಿನಿಂದ ಕಾರ್ಯಪ್ರವೃತ್ತರಾದರೆ ಆ ಕೆಲಸದಲ್ಲಿ ಯಶಸ್ಸು ಪಡೆಯುತ್ತೇವೆ". – ಸುಶಾಂತ್ ಗೌರವ್

ಕೃಷಿ ತಂತ್ರಜ್ಞಾನಗಳನ್ನು ಉತ್ತೇಜಿಸುವ ಮೂಲಕ ಬದಲಾವಣೆಗಳನ್ನು ತಂದಿದ್ದಾರೆ. ಇವರ ಈ ಉತ್ತೇಜನವು 1300 ಎಕರೆ ಇದ್ದ ರಾಗಿ ಕೃಷಿ ಇಂದು 30000 ಎಕರೆಗೆ ಏರಿಕೆಯಾಗಿದೆ. ರಾಗಿ ಬೆಳೆಯನ್ನು ಬೆಳೆಯಲು ಬೇಕಾಗುವ ಎಲ್ಲಾ ಕೃಷಿ ಸಾಮಗ್ರಿಗಳನ್ನು, ನೀರಾವರಿಯಂತಹ ಸುಸ್ಥಿರ ನೀರಾವರಿ ವಿಧಾನಗಳನ್ನು, ನವೀಕರಿಸಿದ ಕೊಳಗಳನ್ನು ಅಳವಡಿಸಲಾಗಿದೆ. ಜೊತೆಗೆ ಸಾವಯವ ಕೃಷಿಗಾಗಿ ಪ್ರಾಯೋಗಿಕ ಯೋಜನೆಗಳನ್ನು ಆರಂಭಿಸಲು ಸಹಕರಿಸಿದ್ದಾರೆ.



ರಾಗಿ ಕೃಷಿಯನ್ನು ಮಾಡುವ ಪ್ರತಿಯೊಬ್ಬರಿಗೂ ಬೇಕಾಗುವ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಮುಂದಾಗಿದ್ದಾರೆ. ಅಲ್ಲದೆ ಇದರ ಜೊತೆಗೆ ರಾಗಿ ಘಟಕಗಳನ್ನು ಸ್ಥಾಪಿಸುವ ಹಾಗೂ ರಾಗಿ ಉತ್ಪನ್ನಗಳನ್ನು ಉತ್ಪಾದಿಸಲು ಮಹಿಳಾ ಸ್ವಸಹಾಯಕ ಗುಂಪುಗಳ ಮೂಲಕ ಪರಿಚಯಿಸಿ ಅವುಗಳ ಉತ್ಪನ್ನದಿಂದಾಗಿ ಲಾಭವನ್ನು ಗಳಿಸುವಂತಹ ಮಾರ್ಗಗಳನ್ನು ನೀಡುವಲ್ಲಿ ಸಹಾಯ ಮಾಡಿದ್ದಾರೆ. ಹಾಗೆಯೇ ಅವರು ತಯಾರಿಸುವ ರಾಗಿ ಲಡ್ಡು ಉತ್ಪನ್ನಗಳಂತಹ ತಿಂಡಿ – ತಿನಿಸುಗಳನ್ನು ಹಾಲುಣಿಸುವ ತಾಯಂದಿರಿಗೆ ವಿತರಿಸಲಾಗುತ್ತದೆ. ಇದರ ಪ್ರಯೋಜನವನ್ನು ಅನೇಕರು ಪಡೆದುಕೊಳ್ಳುವಂತೆಯು ಮಾಡಿದ್ದಾರೆ. ಇವರ ಈ ಪರಿವರ್ತನೆಯಿಂದಾಗಿ ಇಂದು ಅನೇಕ ರೈತರು ತಮ್ಮ ಜೀವನವನ್ನು ಸುಲಭಕರವಾಗಿ ಸಾಗಿಸಲು ಸಹಾಯವಾಗಿದೆ.

ಗುಮ್ಲಾ ಈಗ ಮಿಲ್ಲೆಟ್ ಕೆಫೆಗಳನ್ನು ಒಳಗೊಂಡ ಒಂದು ಮಾದರಿ ಜಿಲ್ಲೆಯಾಗಿ ಹೊರಹೊಮ್ಮಿದೆ. ಇದಕ್ಕೆ ಕಾರಣೀಭೂತರಾದ ಸುಶಾಂತ್ ಅವರು ತಮ್ಮ ಕಾರ್ಯವೈಖರಿಯ ಫಲವಾಗಿ 'ಪ್ರೈಮ್‌ಮಿನಿಸ್ಟರ್ಸ್ ಅವಾರ್ಡ್ ಫಾರ್ ಎಕ್ಸೆಲೆನ್ಸ್ ಇನ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್' ಎಂಬ ಪ್ರಶಸ್ತಿಯನ್ನು ಪ್ರಧಾನಮಂತ್ರಿಗಳಿಂದ ಪಡೆದಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th NOVEMBER 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-12-2024



## ಅಸ್ಸಾಂನ ಅನಿಪುರ್ ಬಸ್ತಿ ಮತ್ತು ಪಟಿಯಾಲ ಬಸ್ತಿಗೆ 'ಸಂಸ್ಕೃತಗ್ರಾಮ' ಗರಿ

ಭಾರತದಲ್ಲಿ ದೇವಭಾಷೆಯೆಂಬ ಗೌರವಕ್ಕೆ ಪಾತ್ರವಾಗಿರುವ ಸಂಸ್ಕೃತವನ್ನು ಕೆಲವು ಹಳ್ಳಿಗಳು ತಮ್ಮ ನಿತ್ಯ ವ್ಯವಹಾರಿಕ ಭಾಷೆಯಾಗಿ ಬಳಸುತ್ತಿವೆ. ಇದು ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಈ ಪ್ರಾಚೀನ ಭಾಷೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ. ಭಾರತದಲ್ಲಿ ಸಂಸ್ಕೃತ-ಮಾತನಾಡುವ ಪ್ರಮುಖ ಹಳ್ಳಿಗಳೆಂದರೆ ಕರ್ನಾಟಕದ ಮತ್ತೂರು ಮತ್ತು ಹೊಸಹಳ್ಳಿ, ಮಧ್ಯಪ್ರದೇಶದ ಜಿರಿ ಮತ್ತು ರಾಜಸ್ಥಾನದ ಗನೋಡ ಮುಂತಾದವು. ಪ್ರತಿಯೊಂದು ಹಳ್ಳಿಯೂ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದು ಸಂಸ್ಕೃತದ ಪುನರುಜ್ಜೀವಕ್ಕೆ ಕೊಡುಗೆ ನೀಡುತ್ತಿವೆ. ಇದೀಗ ಈ ಪಟ್ಟಿಗೆ ಅಸ್ಸಾಂನ ಕೆಲವು ಗಡಿ-ಗ್ರಾಮಗಳು ಹೊಸ ಸೇರ್ಪಡೆಯಾಗಿವೆ. ಅಸ್ಸಾಂ ರಾಜ್ಯದಲ್ಲಿರುವ ಎರಡು ಗಡಿ ಗ್ರಾಮಗಳಾದ ಅನಿಪುರ್ ಬಸ್ತಿ ಮತ್ತು ಪಟಿಯಾಲ ಬಸ್ತಿಯಲ್ಲಿ ಸಂಸ್ಕೃತವನ್ನು ಪುನರುಜ್ಜೀವನಗೊಳಿಸಲಾಗಿದೆ. ದಕ್ಷಿಣ ಅಸ್ಸಾಂನ ಕರೀಂಗಂಜ್‌ನಲ್ಲಿ ಬಾಂಗ್ಲಾದೇಶದ ಗಡಿಯ ಸಮೀಪವಿರುವ ಗಡಿ ಗ್ರಾಮಗಳಲ್ಲಿ ಈ ಭಾಷೆ ಸಂವಹನದ ಅವಿಭಾಜ್ಯ ಅಂಗವಾಗಿದೆ. ಕರೀಂಗಂಜ್ ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಯಾಗಿದ್ದು, ಇಲ್ಲಿ ಅಧಿಕೃತ ಭಾಷೆ ಅಸ್ಸಾಮಿ ಮತ್ತು ಸ್ಥಳೀಯ ಭಾಷೆ ಬಂಗಾಳಿ. ಇಲ್ಲಿ ಸಂಸ್ಕೃತವು ಪಠ್ಯಪುಸ್ತಕಗಳಿಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಅದರ ನಿವಾಸಿಗಳು ಸಂವಹನ ನಡೆಸಲು ಬಳಸುವ ಭಾಷೆಯಾಗಿದೆ, ದೈನಂದಿನ ಜೀವನದಲ್ಲಿ ಹಳ್ಳಿಗರು ಅದನ್ನು ನಿರರ್ಗಳವಾಗಿ ಮಾತನಾಡುತ್ತಾರೆ. ಪಟಿಯಾಲ ಬಸ್ತಿಯ ಕನಿಷ್ಠ 50 ನಿವಾಸಿಗಳು ಭಾಷೆಯನ್ನು ಕರಗತ ಮಾಡಿಕೊಂಡಿದ್ದಾರೆ ಮತ್ತು ಅದರಲ್ಲಿ ಪ್ರವೀಣರಾಗಿದ್ದಾರೆ. ಅನಿಪುರ್ ಬಸ್ತಿಯಲ್ಲಿನ 400 ನಿವಾಸಿಗಳಲ್ಲಿ ಸುಮಾರು 300 ಜನರು ಸಂಸ್ಕೃತದಲ್ಲಿ ಆರಾಮವಾಗಿ ಸಂವಹನ ನಡೆಸುತ್ತಾರೆ, ವ್ಯಾಪಾರ ಮತ್ತು ವೈಯಕ್ತಿಕ ಕರೆಗಳನ್ನು ಪ್ರಾಚೀನ ಭಾಷೆಯಲ್ಲೇ ನಡೆಸುತ್ತಾರೆ. ಪುನರುಜ್ಜೀವನವು ಸುಮಾರು ಒಂಬತ್ತು ವರ್ಷಗಳ ಹಿಂದೆ ಪ್ರಾರಂಭವಾಯಿತು, ಸಂಸ್ಕೃತವನ್ನು ದೈನಂದಿನ ಜೀವನದಲ್ಲಿ ಪುನಃ ಪರಿಚಯಿಸುವ ಗುರಿಯನ್ನು ಹೊಂದಿರುವ ಸಂಸ್ಕೃತ ಭಾರತಿಯ ಕಾರ್ಯಾಗಾರಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರು ಭಾಗವಹಿಸಿದರು. ಅಂದಿನಿಂದ ಆರಂಭವಾದ ಗ್ರಾಮಸ್ಥರ ಆಸಕ್ತಿ, ಇಂದು ಸಂಸ್ಕೃತ ಗ್ರಾಮವಾಗಿ ಬೆಳೆದು ನಿಲ್ಲುವಲ್ಲಿವರೆಗೆ ಬಂದಿದೆ. ಭಾರತದಲ್ಲಿ ನಡೆಯುತ್ತಿರುವ ಭಾಷಾ ಚರ್ಚೆಗಳ ನಡುವೆ, ಅಸ್ಸಾಂನ ಹಳ್ಳಿಗಳು ಎಲ್ಲರಿಗೂ ಉತ್ತಮ ನಿದರ್ಶನಗಳಾಗಿವೆ.

## ಕಳೆದ ಐದು ವರ್ಷಗಳಲ್ಲಿ 57,564 ಮಕ್ಕಳನ್ನು ಕಳ್ಳಸಾಗಣೆಯಿಂದ ರಕ್ಷಿಸಿದೆ ಆರ್‌ಪಿಎಫ್

ರೈಲ್ವೇ ಆವರಣವನ್ನು ಮಾನವ ಕಳ್ಳಸಾಗಣೆದಾರರು ಬಳಸದಂತೆ ನೋಡಿಕೊಳ್ಳುವ ಮಹತ್ತರ ಜವಾಬ್ದಾರಿಯನ್ನು ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ವಹಿಸಿಕೊಂಡಿದೆ. ಆರ್‌ಪಿಎಫ್ ಕಳೆದ ಐದು ವರ್ಷಗಳಲ್ಲಿ 57,564 ಮಕ್ಕಳನ್ನು ಕಳ್ಳಸಾಗಣೆಯಿಂದ ರಕ್ಷಿಸಿದೆ. ಅವರಲ್ಲಿ 18,172 ಹುಡುಗಿಯರು. ಈ ಪಡೆ 80 ಪ್ರತಿಶತ ಮಕ್ಕಳನ್ನು ಅವರ ಕುಟುಂಬಗಳೊಂದಿಗೆ ಮತ್ತೆ ಸೇರಿಸಿದೆ. ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು-ಕಾಶ್ಮೀರದಲ್ಲಿ 262 ರೈಲು ನಿಲ್ದಾಣಗಳನ್ನು ನಿರ್ವಹಿಸುತ್ತಿರುವ ಪಂಜಾಬ್‌ನ ಉತ್ತರ ರೈಲ್ವೆಯ ಫಿರೋಜ್‌ಪುರ ವಿಭಾಗದ ಅಡಿಯಲ್ಲಿ RPF ಮಿಷನ್ – ನನ್ಹೆ ಫರಿಷ್ತೆ ಕಾರ್ಯಾಚರಣೆಯ ಅಡಿಯಲ್ಲಿ ರೈಲುಗಳಲ್ಲಿ ಮಕ್ಕಳ ಕಳ್ಳಸಾಗಣೆಯನ್ನು ತಡೆಗಟ್ಟುವಲ್ಲಿ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ (SOP) ಅನ್ನು ನಡೆಸಲಾಗುತ್ತಿದೆ. ಆಹತ್ ಮತ್ತು ಆಪರೇಷನ್-ಮೇರಿ ಸಹೇಲಿ ಅಡಿಯಲ್ಲಿ ಒಂಟಿ ಮಹಿಳಾ ಪ್ರಯಾಣಿಕರಿಗೆ ರಕ್ಷಣೆ ನೀಡಲಾಗುತ್ತಿದೆ.

## ರಾಮಾಯಣದ ಸ್ಥಳಗಳನ್ನು ಮನೋಜ್ಞ ಜಾಹೀರಾತಿನ ಮೂಲಕ ಪ್ರಚುರಪಡಿಸಿದ ಶ್ರೀಲಂಕಾ ಏರ್‌ಲೈನ್ಸ್

ಭಾರತದ ಪುರಾತನ ಹಿಂದೂ ಮಹಾಕಾವ್ಯ ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಸ್ಥಳಗಳು ಶ್ರೀಲಂಕಾದಲ್ಲಿವೆ. ಈ ಐತಿಹಾಸಿಕ ಸ್ಥಳಗಳಿಗೆ ವೀಕ್ಷಕರನ್ನು ಪ್ರಯಾಣಕ್ಕೆ ಕರೆದೊಯ್ಯುವ 'ದಿ ರಾಮಾಯಣ ಟ್ರಯಲ್' ಅನ್ನು ಪ್ರಚಾರ ಮಾಡಲು ಶ್ರೀಲಂಕಾ ಏರ್‌ಲೈನ್ಸ್ ಹೊಸ ಜಾಹೀರಾತೊಂದನ್ನು ಬಿಡುಗಡೆ ಮಾಡಿ ಗಮನಸೆಳೆದಿದೆ. ಜಾಹೀರಾತು ಶ್ರೀಲಂಕಾದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ನಿರೂಪಣೆಯನ್ನು ಒಳಗೊಂಡಿದೆ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸಿಗರನ್ನು ಆಹ್ವಾನಿಸುತ್ತದೆ. ಐದು ನಿಮಿಷಗಳ ವೀಡಿಯೊವು ಅಜ್ಜಿಯೊಬ್ಬರು ಮಕ್ಕಳ ಪುಸ್ತಕದಿಂದ ತನ್ನ ಮೊಮ್ಮಗನಿಗೆ ರಾಮಾಯಣದ ಕಥೆಯನ್ನು ಹೇಳುವುದರೊಂದಿಗೆ ಪ್ರಾರಂಭವಾಗುತ್ತದೆ.

## ತಿರುಪತಿ ದೇವಾಲಯದಲ್ಲಿ ಹಿಂದುಗಳಷ್ಟೆ ಸಿಬ್ಬಂದಿಗಳಾಗಿರಬೇಕು : ಟಿಟಿಡಿ

ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಿರುಪತಿ ದೇಗುಲದ ವಿವಿಧ ಹುದ್ದೆಗಳಿಗೆ ನೇಮಕವಾಗಿದ್ದ ಹಿಂದೂಯೇತರ ಸಿಬ್ಬಂದಿಯನ್ನು ವಿಆರ್‌ಎಸ್ ಮೂಲಕ ಸ್ವಯಂ ನಿವೃತ್ತಿಗೊಳಿಸಬೇಕು ಅಥವಾ ಅನ್ಯ ಸರ್ಕಾರಿ ಇಲಾಖೆಗೆ ವರ್ಗಾಯಿಸಬೇಕು ಎಂದು ತಿರುಮಲ ತಿರುಪತಿ ದೇವಸ್ಥಾನ ಮಂಡಳಿ (ಟಿಟಿಡಿ) ಗೊತ್ತುವಳಿ ಅಂಗೀಕರಿಸಿದೆ. ಬಿ.ಆರ್.ನಾಯ್ಡು ಅಧ್ಯಕ್ಷತೆಯಲ್ಲಿ ನಡೆದ ಟಿಟಿಡಿ ನೂತನ ಆಡಳಿತ ಮಂಡಳಿಯ ಮೊದಲ ಸಭೆಯಲ್ಲಿ, 'ಟಿಟಿಡಿಯಲ್ಲಿನ ಹಿಂದೂಯೇತರ ಸಿಬ್ಬಂದಿ, ಒಂದೋ ಸ್ವಯಂನಿವೃತ್ತಿ ಪಡೆಯಬೇಕು ಇಲ್ಲವೇ ಸರ್ಕಾರದ ಬೇರೆ ಇಲಾಖೆಗೆ ವರ್ಗಾವಣೆಯಾಗಲು ಸಿದ್ಧರಿರಬೇಕು' ಎಂಬ ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ಟಿಟಿಡಿಯ ಈ ನಿರ್ಧಾರದಿಂದ ಟಿಟಿಡಿ ವ್ಯಾಪ್ತಿಗೆ ಬರುವ 7000 ಖಾಯಂ ಸಿಬ್ಬಂದಿ ಪೈಕಿ 300 ಹಿಂದೂಯೇತರ ಸಿಬ್ಬಂದಿ ತಮಗೆ ನೀಡಿರುವ ಆಯ್ಕೆಯ ಪೈಕಿ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬರಲಿದೆ. ಇನ್ನು ಟಿಟಿಡಿ 14000 ಗುತ್ತಿಗೆ ಸಿಬ್ಬಂದಿಯನ್ನು ಕೂಡ ಹೊಂದಿದ್ದು, ಈ ಪೈಕಿ ಎಷ್ಟು ಹಿಂದೂಯೇತರ ಸಿಬ್ಬಂದಿ ಇದ್ದಾರೆ ಎಂಬುದು ಖಚಿತಪಟ್ಟಿಲ್ಲ. ಟಿಟಿಡಿ ಕಾಯ್ದೆಯ ಅನ್ವಯ ಹಿಂದೂಯೇತರ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಂತಿಲ್ಲ. ಆದರೂ ಹಿಂದಿನ ಜಗನ್ ಅವಧಿಯಲ್ಲಿ ಕಾನೂನು ಬಾಹಿರವಾಗಿ ಇಂಥ ನೇಮಕ ಮಾಡಲಾಗಿತ್ತು ಎಂದು ಮೂಲಗಳು ಹೇಳಿವೆ.



## ಖಾಸಗಿ ಮಾಲಿಕತ್ವದ ಸೊತ್ತುಗಳನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸುವಂತಿಲ್ಲ: ಸರ್ವೋಚ್ಚ ನ್ಯಾಯಾಲಯ

ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ನೇತೃತ್ವದ 9 ಮಂದಿ ನ್ಯಾಯಮೂರ್ತಿಗಳನ್ನೊಳಗೊಂಡ ಸಾಂವಿಧಾನಿಕ ಪೀಠ ಬಹು ಮಹತ್ವದ ತೀರ್ಪೊಂದನ್ನು ಪ್ರಕಟಿಸಿದೆ. ಸಾರ್ವಜನಿಕರ ಒಳಿತಿಗಾಗಿ ಖಾಸಗಿ ಮಾಲಿಕತ್ವದ ಎಲ್ಲಾ ಸೊತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಚಾರಿತ್ರಿಕ ತೀರ್ಪು ಪ್ರಕಟಿಸಿದೆ. ಕೆಲವೊಂದು ಸಂದರ್ಭದಲ್ಲಿ ಮಾತ್ರ ಖಾಸಗಿ ಸೊತ್ತುಗಳ ಮೇಲೆ ಹಕ್ಕು ಸಾಧಿಸಬಹುದು ಎಂದಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಒಂಬತ್ತು ನ್ಯಾಯಾಧೀಶರ ಪೀಠ, 7:2 ಅನುಪಾತದಲ್ಲಿ ಬಹುಮತದ ತೀರ್ಪು ನೀಡಿದೆ. ಈ ಮೂಲಕ ಸಂವಿಧಾನದ ಪರಿಚ್ಛೇದ 39(ಬಿ) ಅಡಿಯಲ್ಲಿ ಖಾಸಗಿ ಒಡೆತನದ ಎಲ್ಲ ಸಂಪನ್ಮೂಲಗಳನ್ನು ಸಾರ್ವಜನಿಕರ ಒಳಿತಿಗಾಗಿ ವಿತರಣೆ ಮಾಡಲು ರಾಜ್ಯಗಳು ಸ್ವಾಧೀನಪಡಿಸಿಕೊಳ್ಳಬಹುದು ಎಂಬ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರ ಪೀಠದ ಹಿಂದಿನ ತೀರ್ಪನ್ನು ಪೀಠ ತಳ್ಳಿಹಾಕಿದೆ. ಸಾರ್ವಜನಿಕ ಒಳಿತಿಗೆ ಪೂರಕವಾಗುವ ರೀತಿ ಸಮುದಾಯದ ಭೌತಿಕ ಸಂಪನ್ಮೂಲಗಳ ಮಾಲಿಕತ್ವ ಮತ್ತು ನಿಯಂತ್ರಣಗಳ ವಿತರಣೆಯಾಗಬೇಕು ಮತ್ತು ಇದಕ್ಕೆ ಪೂರಕವಾಗಿ ರಾಜ್ಯಗಳು ತಮ್ಮ ನೀತಿಗಳನ್ನು ರಚಿಸಬೇಕು ಎಂದು ಪರಿಚ್ಛೇದ 39(ಬಿ) ಅಡಿಯಲ್ಲಿ ಹೇಳಲಾಗಿದೆ. ಹಾಗಾಗಿ ಪರಿಚ್ಛೇದ 39(ಬಿ) ಅಡಿಯಲ್ಲಿ ಹೇಳಲಾಗಿರುವಂತೆ ಸಮುದಾಯದ ಭೌತಿಕ ಸಂಪನ್ಮೂಲಗಳ ವ್ಯಾಖ್ಯಾನ ವ್ಯಾಪ್ತಿಯಲ್ಲಿ ಖಾಸಗಿ ಮಾಲಿಕತ್ವದ ಸಂಪನ್ಮೂಲಗಳು ಕೂಡ ಒಳಗೊಳ್ಳುವುದೇ ಎಂಬುದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಮುಂದಿಟ್ಟ ಪ್ರಶ್ನೆಯಾಗಿತ್ತು. ಇದಕ್ಕೆ ತಾತ್ವಿಕ ಉತ್ತರ ಹೌದು ಎಂದಾಗಿದೆ. ಖಾಸಗಿ ಮಾಲಿಕತ್ವದ ಸಂಪನ್ಮೂಲಗಳು ಕೂಡ ಇಲ್ಲಿ ಸಮುದಾಯದ ಭೌತಿಕ ಸಂಪನ್ಮೂಲ ವ್ಯಾಪ್ತಿಯಲ್ಲಿ ಬರುವ ಸಾಧ್ಯತೆಯಿದೆ. ಆದರೂ ಇದೇ ವಿಚಾರದಲ್ಲಿ ರಂಗಾರೆಡ್ಡಿ ಪ್ರಕರಣದಲ್ಲಿ ನ್ಯಾಯಮೂರ್ತಿ ಕೃಷ್ಣ ಐಯ್ಯರ್ 1978ರಲ್ಲಿ ನೀಡಿದ್ದ ತೀರ್ಪಿಗೆ ಸಹಮತ ಹೊಂದಲು ಸುಪ್ರೀಂ ನಿರಾಕರಿಸಿದೆ. ವ್ಯಕ್ತಿಯೋರ್ವನ ಪ್ರತಿ ಸಂಪನ್ಮೂಲವೂ ಆತನ ಭೌತಿಕ ಆವಶ್ಯಕತೆಗಳಿಗೆ ಸ್ಪಂದಿಸುವ ಮಾಧ್ಯಮಗಳಾಗಿವೆ. ಹಾಗಾಗಿ ಆತನ ಎಲ್ಲಾ ಸಂಪನ್ಮೂಲಗಳೂ ಸಮುದಾಯದ ಅಥವಾ ಸಾರ್ವಜನಿಕ ಭೌತಿಕ ಸಂಪನ್ಮೂಲವೆಂದು ಪರಿಗಣಿಸಲಾಗದು ಎಂದು ನ್ಯಾಯಪೀಠ ಹೇಳಿದೆ.

## ಪ್ರಸಕ್ತ ವರ್ಷ ಗಡಿಯಲ್ಲಿ ಸುಮಾರು 200 ಡ್ರೋನ್‌ಗಳನ್ನು ಹೊಡೆದುರುಳಿಸಿದ ಬಿಎಸ್‌ಎಫ್

ಪಂಜಾಬ್‌ನಲ್ಲಿನ ಅಂತರಾಷ್ಟ್ರೀಯ ಗಡಿಯಲ್ಲಿ ಡ್ರೋನ್ ಒಳನುಸುಳಿವಿಕೆಯ ಪ್ರಮಾಣ ಈ ವರ್ಷ 200ಕ್ಕೆ ದ್ವಿಗುಣಗೊಂಡಿದೆ ಎಂದು ಬಾರ್ಡರ್ ಸೆಕ್ಯುರಿಟಿ ಫೋರ್ಸ್ (ಃಖಈ) ವರದಿಯಲ್ಲಿ ತಿಳಿಸಿವೆ. ಬಿಎಸ್‌ಎಫ್ ಭಾರತದ ಪಶ್ಚಿಮ ಭಾಗದಲ್ಲಿ 2,290-ಕಿಮೀ ಉದ್ದದ ಗಡಿಯ ಭದ್ರತೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದೆ, ಪಂಜಾಬ್ ಉದ್ದಕ್ಕೂ 553 ಕಿಮೀ ಸೇರಿದಂತೆ, ಜಮ್ಮು (ಕಾಶ್ಮೀರದಲ್ಲಿ ಎಲ್‌ಒಸಿ), ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಹೆಚ್ಚುವರಿ ಗಡಿಯ ಜವಾಬ್ದಾರಿ ಹೊಂದಿದೆ. 2023ರಲ್ಲಿ ಃಖಈ ಪಂಜಾಬ್ ಗಡಿಯಲ್ಲಿ 107 ಡ್ರೋನ್‌ಗಳನ್ನು ವಶಪಡಿಸಿಕೊಂಡಿದೆ, ಆದರೆ ಈ ವರ್ಷದ ಸಂಖ್ಯೆಗಳು ಸುಮಾರು ದ್ವಿಗುಣಗೊಂಡಿದೆ, ಇದು ಪಡೆಯ ಡ್ರೋನ್ ವಿರೋಧಿ ತಂತ್ರಗಳು ಮತ್ತು ಸುಧಾರಿತ ಪ್ರತಿಕ್ರಮಗಳ ಬಳಕೆಯಲ್ಲಿನ ಸುಧಾರಣೆಯನ್ನು ಪ್ರತಿಬಿಂಬಿಸುತ್ತದೆ. ಃಖಈನ ಹೆಚ್ಚುತ್ತಿರುವ ನಿಖರವಾದ ಡ್ರೋನ್ ವಿರೋಧಿ ಕಾರ್ಯಾಚರಣೆಗಳು, ಡ್ರಗ್ಸ್ ಮತ್ತು ಶಸ್ತ್ರಾಸ್ತ್ರಗಳನ್ನು ಭಾರತದ ಪ್ರದೇಶಕ್ಕೆ ಕಳ್ಳಸಾಗಣೆ ಮಾಡಲು ಪ್ರಯತ್ನಿಸುತ್ತಿರುವ ಪಾಕಿಸ್ತಾನಿ ಸಿಂಡಿಕೇಟ್‌ಗಳಿಗೆ ದೊಡ್ಡ ಹೊಡೆತವನ್ನು ನೀಡಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.